ಡಾ॥ ವೈ. ನಾಗಪ್ಪ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅವರು ಹೇಳಿರುವಂತಹ ಪ್ರಶ್ನೆಯಲ್ಲಿ ಹುಡುಗನ ಸಾವಿನ ಬಗ್ಗೆ ಕೇಳಿದ್ದರೆ, ಅದರ ಬಗ್ಗೆ ಖಂಡಿತ ಮಾಹಿತಿಯನ್ನು ಒದಗಿಸುತ್ತಿದ್ದೆ. ಆದರೆ ತಾವು ಕೇಳಿರುವಂತಹ ಪ್ರಶ್ನೆಯಲ್ಲಿ ಆ ವಿಚಾರವನ್ನು ಎತ್ತಿಲ್ಲವಾದ್ದರಿಂದ ತಮಗೆ ನಾವು ಆ ಮಾಹಿತಿಯನ್ನು ಒದಗಿಸುವುದಕ್ಕೆ ಆಗಿಲ್ಲ. ಆ ವಿಚಾರದ ಬಗ್ಗೆ ಇನ್ನು ಮುಂದೆ ಬರವಣಿಗೆ ಮೂಲಕ ಮಾಹಿತಿಯನ್ನು ಕೊಡುತ್ತೇವೆ. ಹಾಗೂ ಆದಷ್ಟು ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಾಣ ಮಾಡಿ ಅಲ್ಲಿರುವಂತಹ ಮಕ್ಕಳಿಗೆ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಅಧ್ಯಕ್ಷರು :– ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು):– ಮಾನ್ಯ ಅಧ್ಯಕ್ಷರೆ, ದಿ: 24–03–2005 ರ 17 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 101 ಪ್ರಶ್ನೆಗಳು ಪೈಕಿ 80 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1)

ಅಧ್ಯಕ್ಷರು :– ಮಂಡಿಸಲಾಯಿತು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು :– ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು. ಕಾರ್ಯದರ್ಶಿಯವರು (ಕ.ವಿ.ಸ) ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :– ಮಂಡಿಸಲಾಯಿತು.

(ಅನುಬಂಧ–II)